**ಮಾನ್ಯ ಪ್ರಧಾನ ದಿವಾಣಿ ಮತ್ತು  ಪ್ರ.ದ.ನ್ಯಾ.ದಂ. ನ್ಯಾಯಾಲಯ ಮುಧೋಳ.**

**ಸಿ.ಸಿ.ನಂ.1529/2022**

1 ) ಸರ್ಕಾರದ ಪರವಾಗಿ ಮುಧೋಳ ಪೋ.ಠಾಣೆ

- - - ಫಿರ್ಯಾದಿ.

**- ವಿರುದ್ದ -**

1) ರಾಹೂಲ ಚಂದ್ರಶೇಖರ ಜಾಧವ, ವಯಾಃ 22
ಸಾಃ ಸಂಕನಾಳ, ಹುನಶ್ಯಾಳ ತಾಂಡಾ, ತಾಃ ಬಸವನ ಬಾಗೆವಾಡಿ ಜಿಲ್ಲಾ ಃ ವಿಜಯಪುರ,

- - ಆರೋಪಿ

=====

**:ಆ ರೋ ಪ ಣೆ: :**

ದಿನಾಂಕಃ 09-07-2022 ರಂದು ಮಧ್ಯಾಹ್ನ 4-15 ಗಂಟೆ ಸುಮಾರಿಗೆ ಮುಧೋಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ  ಮುಧೋಳ-ಮಂಟೂರ ರಸ್ತೆಯ ಮೇಲೆ ಮುಧೋಳ ಕಡೆಯಿಂದ ಮಂಟೂರ ಕಡೆಗೆ ಮಂಟೂರ ಬೈಪಾಸ ಕ್ರಾಸದಲ್ಲಿ 1 ನೇ ಆರೋಪಿಯಾದ ನೀನು ಮಹಿಂದ್ರಾ ಕಂಪನಿಯ ಟ್ಯಾಕ್ಟರ ನಂ.ಕೆಎ-48/ಟಿ-5774 ನೇದ್ದಕ್ಕೆ  ನಾಲ್ಕು ಗಾಲಿಯ ಟ್ರೇಲರ್ ನಂ.ಎಂ.ಇ.ಐ-6117 ನೇದ್ದನ್ನು ಜೋಡಿಸಿಕೊಂಡು ಟ್ರೇಲರದಲ್ಲಿ ಪೈಪಲೈನ ಕಾಮಗಾರಿಯ ಸಾಮಾನುಗಳನ್ನು ಲೋಡ ಮಾಡಿಕೊಂಡು ವೆಂಕಪ್ಪ ತಂದೆ ನೀಲಪ್ಪ ಜಲಗೇರಿ ಇವರನ್ನು ನಿನ್ನ ಮಗ್ಗಲು ಇರುವ ದೊಡ್ಡ ಗಾಲಿಯ ಮಡಗಾರ್ಡ ಮೇಲೆ ಕೂಡಿಸಿಕೊಂಡು ಸದರಿ ವಾಹನವನ್ನು ಅತೀ ವೇಗವಾಗಿ ಮತ್ತು ನಿಷ್ಕಾಳಜಿತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಯಿಸಿಕೊಂಡು ಬಂದು ಮಂಟೂರ ಬೈಪಾಸ ಕ್ರಾಸಿನಲ್ಲಿರುವ ರೋಡ ಬ್ರೇಕ್ (ರೋಡ ಹಂಪ್ಸ) ಮೇಲೆ ಟ್ರ್ಯಾಕ್ಟರ  ಜಿಗಿಸಿ ಮಟಗಾರ್ಡ ಮೇಲೆ ಕುಳಿತ ವೆಂಕಪ್ಪ ತಂದೆ ನೀಲಪ್ಪ ಜಲಗೇರಿ ಈತನು ಜೋಲಿ ಹೋಗಿ ಕೆಳಗೆ ಬಿಳಿಸಿ, ಅಪಘಾತಪಡಿಸಿ ಆ ಮೂಲಕ ನೀನು ಭಾ.ದಂ.ಸಂ. ಕಲಂ. **279**  ಐ.ಪಿ.ಸಿ ಕಾಯ್ದೆ  ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

2) ಮೇಲೆ ಹೇಳಿದ ಸ್ಥಳ, ದಿನಾಂಕ, ವೇಳೆ ಮತ್ತು ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 1 ನೇ ಆರೋಪಿತನಾದ ನೀನು ಸದರಿ ಟ್ರ್ಯಾಕ್ಟರನ್ನು ರಸ್ತೆಯ ಮೇಲೆ ಅತೀ ವೇಗವಾಗಿ ನಿಷ್ಕಾಳಜಿತನದಿಂದ ಹಾಗೂ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಓಡಿಸಿಕೊಂಡು ಬಂದು ಮಂಟೂರ ಬೈಪಾಸ ಕ್ರಾಸಿನಲ್ಲಿರುವ ರೋಡ ಬ್ರೇಕ್ (ರೋಡ ಹಂಪ್ಸ) ಮೇಲೆ ಟ್ರ್ಯಾಕ್ಟರ  ಜಿಗಿಸಿ ಮಟಗಾರ್ಡ ಮೇಲೆ ಕುಳಿತ ವೆಂಕಪ್ಪ ತಂದೆ ನೀಲಪ್ಪ ಜಲಗೇರಿ ಈತನು ಜೋಲಿ ಹೋಗಿ ಕೆಳಗೆ ಬಿಳಿಸಿ ಅವನ ಮೇಲೆ ಟ್ರ್ಯಾಕ್ಟರ ಇಂಜಿನ್ನಿನ ಬಲಗಡೆ ಗಾಲಿ ಮತ್ತು ಅದಕ್ಕೆ ಜೋಡಿಸಿದ ಟೇಲರದ ಬಲಗಡೆಯ ಎರಡೂ ಗಾಲಿಗಳು ಹಾಯ್ದು  ತಲೆಗೆ ಬಲಗಾಲಿಗೆ, ಅಲ್ಲಲ್ಲಿ ಮೈಕೈಗೆ ಭಾರಿ ಮತ್ತು ಸಾಧಾ ಗಾಯಪೆಟ್ಟುಪಡಿಸಿ ವೆಂಕಪ್ಪ ಈತನು ಸ್ಥಳದಲ್ಲಿಯೇ ಮರಣ ಹೊಂದಿದ್ದು, ನಿನ್ನ ನಿಷ್ಕಾಳಜಿತನದಿಂದಲೇ ವಾಹನ ಚಲಾಯಿಸಿದ್ದರಿಂದ ಆತನು ಮರಣ ಹೊಂದುವಂತೆ ಮಾಡಿ, ಆ ಮೂಲಕ ನೀನು **ಭಾ.ದಂ.ಸಂ.** 304(**ಎ**) ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ  ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

3) ಮೇಲೆ ಹೇಳಿದ ಸ್ಥಳ, ದಿನಾಂಕ ಹಾಗೂ ವೇಳೆ ಮತ್ತು ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, 1 ನೇ ಆರೋಪಿತನಾದ ನೀನು ಅಧೀಕೃತ ಚಾಲನಾ ಪತ್ರ ಹೊಂದದೇ ಸದರಿ ಮೇಲ್ಕಂಡ ಮಹೀಂದ್ರಾ ಕಂಪನಿಯ ಟ್ಯಾಕ್ಟರ ನಂ.ಕೆಎ-48/ಟಿ-5774 ನೆದ್ದನ್ನು ಚಲಾಯಿಸಿ, ಆ ಮೂಲಕ ನೀನು **ಕಲಂ**.3 **ಸಹಕಲಂ** 181 **ಮೋಟಾರು ವಾಹನ ಕಾಯ್ದೆ** ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

5) ಮೇಲೆ ಹೇಳಿದ ಸ್ಥಳ, ದಿನಾಂಕ ಹಾಗೂ ವೇಳೆ ಮತ್ತು ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, 1 ನೇ ಆರೋಪಿತನಾದ ನೀನು ವಾಹನದ ಪರ್ಮೀಟನ್ನು ಉಲ್ಲಂಘನೆ ಮಾಡಿ ಸದರಿ ಮೇಲ್ಕಂಡ ಮಹೀಂದ್ರಾ ಕಂಪನಿಯ ಟ್ಯಾಕ್ಟರ ನಂ.ಕೆಎ-48/ಟಿ-5774 ನೆದ್ದರಲ್ಲಿ ಅನಧೀಕೃತವಾಗಿ ಜನರನ್ನು ಕೂಡ್ರಿಸಿಕೊಂಡು ಟ್ರ್ಯಾಕ್ಟರನ್ನು ಚಲಾಯಿಸಿ, ಆ ಮೂಲಕ ನೀನು **ಕಲಂ**. 15(**ಎ**) **ಸಹಕಲಂ** 177 **ಮೋಟಾರು ವಾಹನ ಕಾಯ್ದೆ** ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಪ್ರಶ್ನೆಃ1. ಸದರಿ ಆಪಾದನೆಯ ಸಾರಾಂಶ ನಿಮಗೆ ತಿಳಿಯಿತೇ?

ಉತ್ತರಃ 1) ತಿಳಿಯಿತು.

ಪ್ರಶ್ನೆಃ 2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಇಲ್ಲವೇ ವಿಚಾರಣೆಯಾಗಬೇಕೋ?

ಉತ್ತರಃ 1) ಇಲ್ಲ, ವಿಚಾರಣೆಯಾಗಬೇಕು.

(ಆರೋಪಿಗೆ ಆಪಾದನೆಯ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಇಂದು ನನ್ನ ಸಮಕ್ಷಮ ಓದಿ ಹೇಳಿ ವ ಕೇಳಿ ಅವರು ತಿಳಿದುಕೊಂಡು ನಂತರ ಕೊಟ್ಟ ಉತ್ತರವನ್ನು ನಮೂದಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

ದಿನಾಂಕಃ 29.05.2023.

ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕರಿಗಳು,
ಮುಧೋಳ.

1) ರಾಹೂಲ ಚಂದ್ರಶೇಖರ ಜಾಧವ